ಪಿ ಡಬ್ಲ್ಯೂ 1-

ದಿನಾಂಕಃ**12.08.2026**ರಂದು ಸಾಕ್ಷಿ ಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ-1 ರಿಂದ 3 ರವರ ಪರ ಶ್ರೀ ಜಿ.ಕೆ.ಎಂ. ವಕೀಲರಿಂದಃ-**

ನಮ್ಮ ತಂದೆಗೆ ಒಟ್ಟು ಮೂರು ಮಂದಿ ಮಕ್ಕಳು, ಎರಡು ಗಂಡು, ಒಂದು ಹೆಣ್ಣು. ಆಕೆ ಮರಣಿಸಿರುತ್ತಾರೆ. ಆಕೆಯ ಹೆಸರು ಏನು ಎಂದರೆ ಚಿಕ್ಕಗಂಗಮ್ಮ. ಆಕೆಗೆ ಒಟ್ಟು 4 ಜನ ಮಕ್ಕಳು. ಚಿಕ್ಕಗಂಗಮ್ಮನ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ತೋರಿಸಿರುವುದಿಲ್ಲ ಎಂದರೆ ಸರಿ. ಬೋರಯ್ಯನನ್ನು ನೋಡಿರುತ್ತೇನೆ. ಮಾರಯ್ಯನಿಗೆ ಬೋರಯ್ಯ ಮತ್ತು ಚಿಕ್ಕಣ್ಣ ಎಂಬ ಇಬ್ಬರು ಮಕ್ಕಳು ಎಂದರೆ ಸಾಕ್ಷಿಯು ಬೋರಯ್ಯ ಮಾತ್ರ ನೋಡಿರುತ್ತೇನೆ, ಮಾರಯ್ಯನನ್ನು ನೋಡಿರುವುದಿಲ್ಲ ಎನ್ನುತ್ತಾರೆ. ಆ ವಿಚಾರ ಗೊತ್ತಿದ್ದರೂ ನೀವು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಚಿಕ್ಕಣ್ಣನಿಗೆ ಅಪ್ಪೇಗೌಡ, ಗಂಗಯ್ಯ ಮತ್ತು ಜಯಮ್ಮ ಎಂಬ ಮೂರು ಜನ ಮಕ್ಕಳಿರುತ್ತಾರೆ ಎಂದರೆ ಸರಿ. ಬೋರಯ್ಯನಿಗೆ ಇಬ್ಬರು ಹೆಂಡತಿಯರು ಮೊದಲನೇ ಹೆಂಡತಿ ಚಿಕ್ಕಮ್ಮ, ಈಕೆಗೆ ಚಿಕ್ಕಮಾರಯ್ಯ ಮತ್ತು ತಿಮ್ಮಕ್ಕ ಎಂಬ ಇಬ್ಬರೂ ಮಕ್ಕಳು. 2ನೇ ಹೆಂಡತಿ ನಿಂಗಮ್ಮರವರಿಗೆ ಗಂಗಯ್ಯ, ರಾಮಯ್ಯ, ಚಿಕ್ಕಗಂಗಯ್ಯ, ಚಿಕ್ಕಮಾರಯ್ಯ ಮತ್ತು ಚಿಕ್ಕಮ್ಮ ಒಟ್ಟು 5 ಮಂದಿ ಮಕ್ಕಳು ಎಂದರೆ ಸರಿ.

2. ದಾವಾ ಸ್ವತ್ತು ಬೋರಯ್ಯ ಮತ್ತು ಚಿಕ್ಕಣನಿಗೆ ಪಿತ್ರಾರ್ಜಿತವಾಗಿ ಬಂದಂತಹ ಸ್ವತ್ತು ಎಂದರೆ ಸುಳ್ಳು. ಹಾಗಾದರೆ ಅವರಿಗೆ ಸ್ವತ್ತು ಹೇಗೆ ಬಂತು ಎಂದರೆ ಸಾಕ್ಷಿ ಸುಳ್ಳು ಖಾತೆ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ಬೋರಯ್ಯ ಮತ್ತು ಚಿಕ್ಕಣ್ಣ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದರಾ ಇಲ್ಲವಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿದು, ಮುಂದುವರೆದು ನಮ್ಮ ತಂದೆ ಕೆಂಪಯ್ಯ ಸ್ವಯಾರ್ಜಿತವಾಗಿ ಕೊಂಡು ಕೊಂಡಿರುತ್ತಾರೆ ಎನ್ನುತ್ತಾರೆ. ಬೋರಯ್ಯ ಮತ್ತು ಚಿಕ್ಕಣ್ಣ ದಾವಾ ಸ್ವತ್ತಿನ ಜಂಟಿ ಸ್ವಾಧೀನಾನುಭವದಲ್ಲಿ ಇದ್ದರು, ಅವರ ಮರಣಾ ನಂತರ ಅವರುಗಳ ಮಕ್ಕಳು ಇವತ್ತಿಗೂ ಸ್ವಾಧೀನದಲ್ಲಿ ಮುಂದುವರೆದಿರುತ್ತಾರೆ ಎಂದರೆ ಸುಳ್ಳು.

ದಾವಾ ಸ್ವತ್ತು ಸ.ನಂ. 8 ಎಷ್ಟು ಪೋಡುಗಳಾಗಿವೆ ಎಂದರೆ ಸಾಕ್ಷಿಯು ಪೋಡುಗಳು ಆಗಿಲ್ಲ, ಸರ್ವೇ ಆಗಿಲ್ಲ ಎಂದು ನುಡಿಯುತ್ತಾರೆ.

3. ದಾವಾ ಸ್ವತ್ತಿನ ಪೂರ್ವಕ್ಕೆ-ಯಾರಿದ್ದಾರೆ ಎಂದರೆ ಗಂಗಯ್ಯ ಅಂದರೆ ನಮ್ಮದೇ ಸ್ವತ್ತು. ಆ ಸ್ವತ್ತು ನಿಮಗೆ ಹೇಗೆ ಬಂತು ಎಂದರೆ ನಮ್ಮ ಅಪ್ಪರವರು ಕೊಂಡಿರುತ್ತಾರೆ ಎನ್ನುತ್ತಾರೆ. ಯಾವಾಗ ಮತ್ತು ಯಾರಿಂದ ಕೊಂಡರು ಎಂದರೆ ದಿನಾಂಕ ಗೊತ್ತಿಲ್ಲ, ಬಯಾನ್ ಸಾಬ್ ರವರ ಕಡೆಯಿಂದ ಕೊಂಡುಕೊಂಡಿರುತ್ತಾರೆ, ಆ ಬಗ್ಗೆ ನನ್ನ ಬಳಿ ಪತ್ರ ಇದೆ ಎನ್ನುತ್ತಾರೆ. ಆ ಮೂಲ ಪತ್ರವನ್ನು ನೋಡಿರುತ್ತೀರಾ ಎಂದರೆ ಇಲ್ಲ, ಸಾಕ್ಷಿ ಮುಂದುವರೆದು ಪತ್ರ ಸಿಗದ ಕಾರಣ ನೊಂದಣಿ ಕಛೇರಿಯಿಂದ ತೆಗೆಸಿಕೊಂಡಿರುತ್ತೇವೆ ಎನ್ನುತ್ತಾರೆ. ಆ ವಿಚಾರವನ್ನು ನೀವು ನಿಮ್ಮ ವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಹೌದು ಎನ್ನುತ್ತಾರೆ. ಆ ರೀತಿ ಬರೆಯದೇ ಇದ್ದರೂ ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಕ್ರಯ ಪತ್ರದಲ್ಲಿ ಬರೆದಿರುವ ಚಕ್ಕುಬಂಧಿ ಗೊತ್ತಾ ಎಂದರೆ ಸಾಕ್ಷಿಯು ನಾನು ವಿದ್ಯಾವಂತನಲ್ಲ, ಅದು ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ.

4. ಈ ದಾವೆಯನ್ನು ಹೂಡುವ ಮುನ್ನ ಕ್ರಯಪತ್ರದಲ್ಲಿನ ಅಂಶಗಳನ್ನು ಯಾರ ಕಡೆಯಿಂದಾನಾದರೂ ಓದಿಸಿ ಕೇಳಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನಮಗೆ ಮೂಲ ಪತ್ರ ಸಿಕ್ಕಿರುವುದಿಲ್ಲ, ಅದರ ಕಾಪಿ ಪಡೆದುಕೊಂಡ ನಂತರ ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ಲಾಯರ್ ನ್ನು ಬಿಟ್ಟು ಬೇರೆ ಯಾರ ಕಡೆ ಓದಿಸಿರುವುದಿಲ್ಲ ಎನ್ನುತ್ತಾರೆ. ಕ್ರಯ ಪತ್ರದಲ್ಲಿರುವ ಸ.ನಂ. ಮತ್ತು ಚಕ್ಕುಬಂಧಿ ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಸ.ನಂ. ಗೊತ್ತು ಅದು 8/7 ಎನ್ನುತ್ತಾರೆ. ಚಕ್ಕುಬಂಧಿ ಗೊತ್ತಿಲ್ಲ ಎಂದರೆ ಚಕ್ಕುಬಂಧಿ ನನಗೆ ಗೊತ್ತಾಗುವುದಿಲ್ಲ, ದಿಕ್ಕು ತೋರಿಸಿ ಹೇಳಬಲ್ಲೇ ಎನ್ನುತ್ತಾರೆ. ಕ್ರಯ ಪತ್ರದಲ್ಲಿ ಬರೆದಿರುವಂತೆ ಸೂರ್ಯ ಹುಟ್ಟುವ ಕಡೆಗೆ ಗಂಗಯ್ಯ ಅಂದರೆ ನಮ್ಮದೇ ಸ್ವತ್ತು, ಸೂರ್ಯ ಮುಳುಗುವ ಕಡೆ ನಮ್ಮದೇ ಜಮೀನು,

ಪಿ ಡಬ್ಲ್ಯೂ 1-

ಉತ್ತರಕ್ಕೆ-ಚಿಕ್ಕಾಪುರದ ಯಲ್ಲೀ ಸರ್ಕಾರದ ಜಮೀನು, ದಕ್ಷಿಣದ ಕಡೆಗೆ ಚಿಕ್ಕಣ್ಣನ ಮಗ ಗಂಗಣ್ಣನ ಜಮೀನು.

5. ಸ.ನಂ.8/3 ತಿಮ್ಮಾಚಾರ್ ರವರಿಗೆ ಸೇರಿದ್ದು ಎಂದರೆ ಸರಿ. ಸ.ನಂ.8/6 ಯಾರಿಗೆ ಸೇರಿದ್ದು ಎಂದರೆ ಸಾಕ್ಷಿಯು ಜಮೀನು ನಮ್ಮಲ್ಲೇ ಇದೆ ನಾವೆ ಮಾಡುತ್ತಿದ್ದೇವೆ, ಪೋಡುಗಳು ತಪ್ಪಾಗಿ ಅದಲು ಬದಲಾಗಿರುತ್ತವೆ, ಅವುಗಳನ್ನು ಸರಿ ಪಡಿಸಿಕೊಂಡಿರುವುದಿಲ್ಲ ಎನ್ನುತ್ತಾರೆ. ತಪ್ಪು ಏನಾಗಿದೆ ಎಂದರೆ ಪೋಡುಗಳು ಅದಲು ಬದಲಾಗಿವೆ ಎನ್ನುತ್ತಾರೆ. ನೀವು ತಿಳಿದುಕೊಂಡಿರುವ ಹಾಗೆ ಸ.ನಂ.8 ರಲ್ಲಿ ಇರುವ ಎಲ್ಲಾ ಪೋಡುಗಳು ತಪ್ಪಾಗಿರುತ್ತವೆ ಎಂದರೆ ಸಾಕ್ಷಿಯು ಸರ್ವೇಯರ್ ಬಂದಾಗ ಎಲ್ಲವೂ ತಪ್ಪಾಗಿವೆ ಎಂದು ಹೇಳಿರುತ್ತಾರೆ ಎನ್ನುತ್ತಾರೆ. ನೀವು ಹೇಳುವ ಹಾಗೆ ಪೋಡುಗಳೆಲ್ಲವೂ ತಪ್ಪಾಗಿದ್ದರೇ ಸದರಿ ಪೋಡುಗಳ ಸ್ವಾಧೀನದಲ್ಲಿ ಮೂಲ ಮಾಲೀಕರುಗಳ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸುಳ್ಳು ಎನ್ನುತ್ತಾರೆ. ಮೂಲ ಸ.ನಂ.8 ರ ಒಟ್ಟು ವಿಸ್ತೀರ್ಣ ಎಷ್ಟು ಎಂದರೆ ಗೊತ್ತಿಲ್ಲ. ಸ.ನಂ.8/6 ನಿಮಗೆ ಹೇಗೆ ಬಂತು ಎಂದರೆ ಅದನ್ನು ನಮ್ಮ ತಂದೆ ಕೊಂಡು ಕೊಂಡಿರುತ್ತಾರೆ, ಆ ಬಗ್ಗೆ ನನ್ನ ಬಳಿ ಪತ್ರ ಇದೆ, ಆದರೆ ಪೋಡು , ಸ.ನಂ. ಅದಲು ಬದಲಾಗಿರುತ್ತದೆ ಎನ್ನುತ್ತಾರೆ. ಅದಲು ಬದಲಾಗಿ ಏನಾಗಿದೆ ಎಂದರೆ ಸ.ನಂ.8/5 ಗಂಗಯ್ಯ ಅಂದರೆ ನನಗೆ ಬರುತ್ತದೆಂದು ಹೇಳುತ್ತಿದ್ದಾರೆ, ಅದೇ ರೀತಿ ಸ.ನಂ.8/6 ಚಿಕ್ಕಣ್ಣರವರಿಗೆ ಹೋಗುತ್ತದೆ ಎಂದು ಹೇಳುತ್ತಿದ್ದಾರೆ , ಆದ್ದರಿಂದ ನಾವುಗಳಿಬ್ಬರೂ ಭಾಗ ಮಾಡಿಕೊಂಡಿರುವುದಿಲ್ಲ ಎನ್ನುತ್ತಾರೆ.

**ಮುಂದುವರೆದ ವಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲವಕಾಶ ಕೋರಿದ್ದು , ಕಾಲವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**9**ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ತುಮಕೂರು.